ಇದೆ. ಹಳೇ ಆಚರಣೆಗಳಾದ ಜಕಣಿ, ಅಜ್ಜಿ, ಆಸಾಡಿ ಹಬ್ಬ ಮೊದಲಾದವುಗಳನ್ನು ಧಾರ್ಮಿಕ, ಆಧ್ಯಾತ್ಮಿಕ ಅಂತ ಎಂದೂ ಭಾವಿಸದ ನಮ್ಮೂರ ಜನರಿಗೆ ಧಾರ್ಮಿಕ, ಆಧ್ಯಾತ್ಮಿಕ ಎಂದರೆ ನಾಗಮಂಡಲಾದಿಗಳು ಎಂಬಷ್ಟು ಅಲೌಕಿಕ ಜ್ಞಾನ ಲಭ್ಯವಾಗಿದೆ.

ಆಧ್ಯಾತ್ಮಿಕ ಧಾರ್ಮಿಕ ಎಂಬ ಪದಗಳು ನಮ್ಮೂರ ಮೇಲೆ ದಾಳಿ ಮಾಡಿದ ತರುವಾಯದಲ್ಲಿ ನಮ್ಮೂರಿಗೆ ಬಂದವರು ಪ್ರಕಾಶರಾಜರು. ನಮ್ಮೂರ ಎಲ್ಲ ಹೆಣ್ಣಿನ ಗಂಡಂದಿರಂತೆ ದುಗ್ಗು ಎಂಬವಳ ಮಗಳ ಗಂಡನಾಗಿ ನಮ್ಮ ಗ್ರಾಮ ಪ್ರವೇಶ ಮಾಡಿದವರು. ಹತ್ತು ಮುಡಿ ಹುಟ್ಟುವಳಿ ಎರಡು ಹೆಣ್ಣು ಮಕ್ಕಳಿಗೆ ಪಾಲಾದಾಗ ಐದು ಮುಡಿ ಪಡೆದು ಸಾಗುವಳಿಗೆ ಶುರುಮಾಡಿದವರು. ಮೀನು ತಿನ್ನುವುದು ಧರ್ಮವಾದ ಜಾತಿಯಲ್ಲಿ ಹುಟ್ಟಿ ಬೆಳೆದರೂ ಶನಿವಾರ ಮೀನು ತಿನ್ನುವುದಿಲ್ಲ ಅಂತ ಸುದ್ದಿಯಾದವರು. ವಾರದಲ್ಲಿ ಒಂದು ದಿನದ ನಿಷೇಧದಿಂದ ಆರಂಭಿಸಿದವರು ಸೋಮವಾರ, ಗುರುವಾರಗಳಿಗೂ ವಿಸ್ತರಿಸಿಕೊಂಡು ಪರಮ ಭಕ್ತರೆನಿಸಿಕೊಂಡವರು. ಈಗ ಮಹಾವಿಷ್ಣು ಮತ್ತು ಪರಶಿವನ ದಿನಗಳಾದ ಶನಿವಾರ ಮತ್ತು ಸೋಮವಾರ ಮೀನು ಮಾರುವವನು ನಮ್ಮೂರಿನತ್ತ ಕಾಲಿಡುವುದೇ ಇಲ್ಲ ಎಂಬಷ್ಟಾಗಲು ಕಾರಣರಾದವರು.

ಊರಲ್ಲಿ ಯಾರೊಂದಿಗೂ ಹೆಚ್ಚು ಬೆರೆಯದ, ಮಾತುಕತೆಯಲ್ಲಿ ತೊಡಗದ ಪ್ರಕಾಶರಾಜರಿಗೆ ಇವರ ಗದ್ದೆ ತೋಟದ ಕೆಲಸಕ್ಕೆ ಬರುವ ಬಚ್ಚನೊಬ್ಬನೇ ಸಂಗಾತಿ. ಇವರ ಅಧ್ಯಾತ್ಮ ತತ್ವ ಚಿಂತನೆಗಳ ಬೋಧನೆಗೆ ಸಿಕ್ಕ ಮೊದಲ ಬಲಿಪಶುವೂ ಅವನೇ. ಇವರ ಸಂಶೋಧನೆಗಳ ಮೊದಲ ಪ್ರಯೋಗವೂ ಅವನ ಮೇಲೇ.

ಸಂಜೆಯ ವಿರಾಮ ಕಾಲದಲ್ಲೆಲ್ಲ ಪ್ರಕಾಶರು ಬಚ್ಚನಿಗೆ ಅಧ್ಯಾತ್ಮದ ತರಗತಿ ತೆಗೆದುಕೊಳ್ಳುತ್ತಿದ್ದರು. ಕೆಸರು ಗದ್ದೆಯಲ್ಲಿ ಹೂಡಿಯೋ, ಹೊದ್ದು ಮಾಡಿಯೋ ದುಡಿದು ಸಂಜೆಯ ಚಹಾಕ್ಕೆ ಪ್ರಕಾಶರ ಮನೆಗೆ ಬರುವ ಬಚ್ಚನಿಗೆ ಅಧ್ಯಾತ್ಮದ ತರಗತಿಗಳು ಉಚಿತವಾಗಿ ಲಭ್ಯವಾಗುತ್ತಿದ್ದವು.

'ಮನುಷ್ಯ ಎಂದರೆ ಮನುಷ್ಯ ಅಲ್ಲ. ಈ ದೇಹದೊಳಗಿರುವ ಆತ್ಮವೇ ಮನುಷ್ಯ. ದೇಹಕ್ಕೆ ಸುಖ ಆದರೆ ಸುಖ ಅಲ್ಲ. ಆತ್ಮಕ್ಕೆ ಸುಖ ಆದರೆ ಮಾತ್ರ ನಿಜವಾದ ಸುಖ. ಆತ್ಮಕ್ಕೆ ಸುಖ ಆಗಬೇಕಾದರೆ ದಿನವೂ ಓಂಕಾರ ಪ್ರಣವವನ್ನು ಒಂದು ಗಂಟೆಯಾದರೂ ಉಚ್ಚರಿಸ ಬೇಕು' ಎಂದು ಬಚ್ಚನನ್ನು ಮತ್ತೆ ಮತ್ತೆ ಎಚ್ಚರಿಸುತ್ತಿದ್ದರು.

ನಮಗೆ ಬರುವ ಎಲ್ಲ ಕಷ್ಟಗಳಿಗೂ ಕಾರಣ ಎರಡೇ ಎರಡು. ಒಂದು ನಾವು ಓಂಕಾರವನ್ನು ಉಚ್ಚರಿಸದೇ ಇರುವುದು. ಎರಡು ಉಚ್ಚರಿಸಿದರೂ ತಪ್ಪಾಗಿ ಉಚ್ಚರಿಸುವುದು ಎಂಬುದು ಪ್ರಕಾಶರ ದೃಢ ನಿಲುವು. ಪ್ರಣವಾರ್ಥ ವಿಚಾರಗಳಿಲ್ಲದೆ ಬಚ್ಚನ ಆತ್ಮ ದುರ್ಬಲವಾಗಿ ಹೋಗುವುದನ್ನು ತಪ್ಪಿಸಬೇಕೆಂದು ಪಣತೊಟ್ಟವರಂತೆ ಅವನಿಗೆ ಓಂಕಾರದ ಉಚ್ಚಾರ ಹೇಳಿಕೊಡುತ್ತಿದ್ದರು. ಇವನು ಹೇಗೇ ಉಚ್ಚಾರ ಮಾಡಿದರೂ ಅದು ತಪ್ಪಾಯ್ತೆಂದೂ ಶಬ್ದ ಇನ್ನೂ ಗಟ್ಟಿಯಾಗಿ ಬರಬೇಕೆಂದೂ, ಅದು ನಾಭಿಯಿಂದ ಆರಂಭವಾಗಿ ಜಿಹ್ವೆಗೆ ಹರಿಯಬೇಕೆಂದೂ; ಓಂಕಾರದಲ್ಲಿ ನಮಗೆ 'ಒ' ಅಕ್ಷರ ಇದ್ದಂತೆ ಭಾಸವಾದರೂ ಅದು 'ಅ' ಸ್ವರದಿಂದ ಆರಂಭವಾಗಬೇಕೆಂತಲೂ 'ಮ್' ವ್ಯಂಜನದೊಂದಿಗೆ ಕೊನೆಯಾಗಬೇಕೆಂತಲೂ ಹಾಗಲ್ಲದೆ ಬೇರೆ ಹೇಗೆ ಉಚ್ಚರಿಸಿದರೂ ಅದು ನೀರ ಮೇಲೆ ಹೋಮ ಮಾಡಿದಂತಾಗುತ್ತದೆಂತಲೂ ಎಚ್ಚರಿಸುತ್ತಿದ್ದರು. ಅಂಥ ಸಂದರ್ಭಗಳಲ್ಲೆಲ್ಲ ಬಚ್ಚ, 'ನೀರು ಬಿಟ್ಟು